# ಸರ್ವಜ್ಞನ ವಚನಗಳಲ್ಲಿ ಸಾಮಾಜಿಕ ನಿಲುವು

**ಡಾ. ಹೊನ್ನಪ್ಪ ಹೊನ್ನಪ್ಪನವರ**
**ಕನ್ನಡ ಉಪನ್ಯಾಸಕರು**
**ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ**
**ರಾಣೇಬೆನ್ನೂರು**

ಸರ್ವಜ್ಞ ನೆಂಬುವನು ಗರುವದಿಂದಾದವನೆ

ಆರುವರಲಿ ಆಡಿ ಕಲಿಕಲಿತು – ವಿದ್ಯದ

ಪರುವತವಾದ ಸರ್ವಜ್ಞ !

ಇಂತಹ ವಿನಮ್ರ ಕವಿಯ ಕಾಲ ಆರ್ ನರಸಿಂಹಚಾರ ಆವರ ಪ್ರಕಾರ 1200 ಆದು ಕೂಡ ನಿಖರವಲ್ಲ ಈತನು ವೀರಶೈವ ಕವಿ ತಂದೆ ಬಸವರಸ ತಾಯಿ ಮಾಳಿ. ಬಸವರಸನಿಗೆ ಮಕ್ಕಳಿಲ್ಲದ ಕಾರಣ ಕಾಶೀಗೆ ಹೋಗಿ ಈಶ್ವರನಲ್ಲಿ ತನಗೆ ಗಂಡು ಮಗುವಾಗಬೇಕೆಂದು ಪ್ರಾರ್ಥಿಸಿ , ಈಶ್ವರನಿಂದ ಪ್ರಸಾದ ಸ್ವೀಕರಿಸಿ ಊರಿಗೆ ಹಿಂದಿರುಗುವಾಗ ದಾರಿಯಲ್ಲಿ ಅಬಲೂರಿನ ಒಬ್ಬ ಕುಂಬಾರನ ಮನೆಯಲ್ಲಿ ತಂಗುವನು. ಅಲ್ಲಿ ಕುಂಬಾರನ ಮಗಳಾದ 'ಮಾಳಿ' ಯಲ್ಲಿ ಮೋಹಿತನಾಗುತ್ತಾನೆ. ಅದರ ಫಲವಾಗಿ ಜನಿಸಿದವನು ಸರ್ವಜ್ಞ.

ಸಾಮಾಜಿಕ ಪ್ರಜ್ಞೆ ಇರದವರು ನಿಜವಾದ ಸಾಹಿತಿಗಳಲ್ಲ, ಸಾಮಾಜಿಕ ಕಾಳಜಿ ಸರ್ವಜ್ಞನ ವಚನಗಳಲ್ಲಿ ಕಂಡು ಬರುವ ಮುಖ್ಯ ಸಂಗತಿಗಳಲ್ಲೊಂದು. ಬಸವಣ್ಣನ ನಂತರ ಅದನ್ನು ಮುಂದುವರೆಸಿಕೊಂಡು ಬಂದವರೆಂದರೆ ಕನಕ ಹಾಗೂ ಸರ್ವಜ್ಞ. 1927 ರ ವೇಳೆಗೆ ಸ ದಿ. ಉತ್ತಂಗಿ ಚನ್ನಪ್ಪ ಅವರು 1928 ತ್ರಿಪದಿಗಳನ್ನು ಸಂಪಾದಿಸಿ 'ಸರ್ವಜ್ಞನ ವಚನಗಳು' ಎನ್ನುವು ಹೆಸರಿನಲ್ಲಿ ಸಂಪುಟವನ್ನು ಹೊರ ತಂದು ಅವುಗಳಲ್ಲಿ ಸು. 1366 ಸರ್ವಜ್ಞನ ವಚನಗಳು ಎನ್ನುವುದರಲ್ಲಿ ಸಂಶಯವಿಲ್ಲವೆಂದು ಹೇಳಿದ್ದಾರೆ. ಕನ್ನಡದ ಖ್ಯಾತ ವಿದ್ವಾಂಸರಾದ ಎಲ್.ಬಸವರಾಜು ಅವರಿಗೆ 1636 ರಲ್ಲಿ ವೆಂಕನೆಂಬುವನು ನಕಲು ಮಾಡಿಕೊಂಡಿದ್ದ ಒಂದು ಓಲೆಯ ಗ್ರಂಥ ದೊರೆಯುತ್ತದೆ. ಅದರ ಆಧಾರದ ಮೇಲೆ ಸರ್ವಜ್ಞನ ವಚನಗಳ ಸಂಖ್ಯೆ 937 ಎಂದು ಖಚಿತಪಡಿಸಿದ್ದಾರೆ. ಇದಕ್ಕೆ ಇನ್ನೂ 100 ವಚನಗಳನ್ನು ಸೇರಿಸಬಹುದಷ್ಟೆ.

ಸರ್ವಜ್ಞನ ವಚನಗಳೊಳಗೆ ಹೊಕ್ಕಾಗ ಸಮಾಜದ ಎಲ್ಲಾ ಅಂಕು ಡೊಂಕುಗಳನ್ನು ತಿದ್ದುವ ಔಷಧಿ ದೊರಕುತ್ತದೆ. ಹಸಿವು, ಜಾತಿ, ಧರ್ಮ, ಗುರು, ಸಂಸಾರ, ಸ್ತ್ರೀ, ಭಕ್ತಿ, ದಾನ, ರಾಜನೀತಿ, ವೇಶ್ಯಾ, ಕೃಷಿ ಹಾಗೂ ಲಿಂಗಪದ್ಧತಿ ಈ ಎಲ್ಲಾ ವಿಚಾರಗಳ ಬಗೆಗೆ ಸಮಾಜವನ್ನು ತಿದ್ದುತ್ತದೆ, ತಾನು ಸರ್ವರೊಳಗೆ ಒಂದೊಂದು ನುಡಿಯ ಕಲಿತು ಬೆಳೆದವನು ಎಂದು ವಿನಮ್ರತೆಯಿಂದ ಹೇಳುತ್ತಾನೆ. ಜಾತಿ ವಿರೋಧದ ಧ್ವನಿಗಳು ಶತ – ಶತಮಾನಗಳಿಂದ ಕೇಳುತ್ತಲೆ ಬಂದಿವೆ. ಆದರೂ ಈ ಸಮಾಜದ ಜನ ಜಾತಿಯಿಂದ ಹೊರ ಬಂದು ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡದಿರುವುದು ವಿಷಾದನೀಯ ಸಂಗತಿ. ಸರ್ವಜ್ಞನಲ್ಲಿಯು ಕೂಡಾ ಜಾತಿ ವಿರೋಧದ ಧ್ವನಿ ಗಟ್ಟಿಯಾಗಿ ಕೇಳಿ ಬಂದಿದೆ.

ಎಲುವಿನ ಕಾಯಕ್ಕೆ ! ಸಲೆ ಚರ್ಮವನು ಹೊದಿಸಿ
ಮಲ ಮೂತ್ರ ಕ್ರಿಯೆಯು ಒಳಗಿರ್ಪ – ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ

ಎಲ್ಲ ಮನುಷ್ಯನ ದೇಹವು ಎಲುಬಿನಿಂದ ಕೂಡಿದ್ದು, ಮೇಲೆ ಚರ್ಮ, ಒಳಗೆ ಮಲ – ಮೂತ್ರ ಹೊಂದಿರುವ ಈ ದೇಹಕ್ಕೆ ಕುಲ ಯಾವುದು? ಎಂದು ಸರ್ವಜ್ಞ ಪ್ರಶ್ನಿಸುತ್ತಾನೆ. ಕನಕರ ಕುಲ – ಕುಲ ಕುಲವೆಂದು ಹೊಡೆದಾಡದಿರಿ ಎನ್ನುವ ಕೀರ್ತನೆಯು ಕೂಡಾ ಇದೆ ಸಂದೇಶವನ್ನು ಸಾರುತ್ತದೆ.

ಜಾತಿ ಹೀನನ ಮನೆಯ ! ಜ್ಯೋತಿ ತಾ ಹೀನವೇ
ಜಾತಿ ವಿಜಾತಿಯೆನಬೇಡ – ಶಿವನೊಲಿ
ದಾತನೇ ಜಾತ – ಸರ್ವಜ್ಞ

ವಿಶ್ವ ಬಂಧುತ್ವದ ತತ್ವವನ್ನು ಸಾರುವ ಸರ್ವಜ್ಞ ಜಾತಿ ವಿಜಾತಿ ಎಂದು ಕಚ್ಚಾಡುವವರನ್ನು ಪ್ರಶ್ನೆ ಮಾಡುತ್ತಲೆ ಶಿವನನ್ನು ಒಲಿಸಿಕೊಳ್ಳುವವುನೆ ನಿಜವಾದ ಜಾತ ಎನ್ನುತ್ತಾನೆ.

ನಡೆಯುವುದೊಂದೆ ಭೂಮಿ, ಕುಡಿಯುವೊಂದೆ ನೀರು
ಸುಡುವಗ್ನಿಯೊಂದೆ ಇರುತಿರಲು ! ಕುಲ ಗೋತ್ರ
ನಡುವೆ ಎತ್ತಿಇದು ಸರ್ವಜ್ಞ!

ಕುಲ – ಗೋತ್ರಗಳ ಮಧ್ಯದಲಿ ತರತಮದ ಭಾವನೆ ಸೃಷ್ಟಿಸಿರುವ ಮನುವಾದಿಗಳಿಗೆ, ನಾವು ನಡೆಯುತ್ತಿರುವ ಭೂಮಿ ಒಂದೆ, ನೀರು ಒಂದೆ, ನಾಳೆ ನಮ್ಮನ್ನು ಸುಡುವ ಅಗ್ನಿಯು ಒಂದೆ ಎಲ್ಲಿದೆ ಭೇದ – ಭಾವ ಎನ್ನುತ್ತಾನೆ ಸರ್ವಜ್ಞ. ಮಹಿಳಾ ಶೋಷಣೆ ಇಂದು ನಿನ್ನೆಯದಲ್ಲ, ಮಹಿಳಾ ಶೋಷಣೆಯನ್ನು ಖಂಡಿಸುವ ಸರ್ವಜ್ಞ ಪಲ್ಲಕ್ಕಿ ಏರಿದವರಿಂದ ಹಿಡಿದು ಜನಸಾಮಾನ್ಯರವರೆಗೂ ಎಲ್ಲರೂ ಹೆಣ್ಣಿನಿಂದಲೆ ಸೃಷ್ಟಿಯಾಗಿರುವುದು. ಹಾಗಾಗಿ ಮಹಿಳಾ ಶೋಷಣೆ ಅಮಾನವೀಯ ಕೃತ್ಯ ಎಂದು ಯೋಚಿಸಬೇಕಾಗಿದೆ.

ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು
ನೆಲ್ಲಕ್ಕಿಯಂತೆ ಸುಲಿವಲ್ಲ ! ಹಿರಿಯರು
ನಲ್ಲಳಿಂದಲ್ಲೆ ಸರ್ವಜ್ಞ !

ಇಂದು ಕೃಷಿ ಹಾಗೂ ಕೃಷಿಕ ಇಲ್ಲದೆ ಹೋದರೆ ಆ ದೇಶದ ಸ್ಥಿತಿ ಚಿಂತಾಜನಕವಾಗುತ್ತದೆ. ಒಂದು ದೇಶಕ್ಕೆ ಕೃಷಿಕ ಎಷ್ಟು ಮುಖ್ಯ ಎನ್ನುವುದನ್ನು ಸರ್ವಜ್ಞ ತನ್ನ ವಚನದಲ್ಲಿ ತಿಳಿಸಿದ್ದಾನೆ.

ಕೋಟಿ ವಿದ್ಯೆಗಳಲ್ಲಿ ! ಮೇಟಿ ವಿದ್ಯೆಯೆ
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ
ದಾಟವೇ ಕೆಡಗು – ಸರ್ವಜ್ಞ!

ಈ ದೇಶದಲ್ಲಿ ಆಳ್ವಿಕೆ ಮಾಡಿದ ಸರ್ಕಾರಗಳು ಕೃಷಿಗೆ ಕೊಟ್ಟಿರುವ ಮಹತ್ವ ಅಷ್ಟಕ್ಕಷ್ಟೆ. ಕಳೆದ 40 ವರ್ಷಗಳಲ್ಲಿ ಈ ದೇಶದ ರೈತ ಬೆಳೆದ ಗೋಧಿಯ ಬೆಲೆ 19 ಪಟ್ಟು ಹೆಚ್ಚಾದರೆ. ಕೇಂದ್ರದ ಸರ್ಕಾರಿ ನೌಕರರ ಸಂಬಳ 120 ಪಟ್ಟು ಹೆಚ್ಚಾಗಿದೆ. ಇಷ್ಟಿದ್ದರೂ ರೈತ ದೇಶದ ಬೆನ್ನೆಲುಬು ಎಂದು ನಾಟಕವಾಡುವುದನ್ನು ರಾಜಕಾರಣಿಗಳು ಬಿಟ್ಟಿಲ್ಲ. 'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ' ಎನ್ನುವ ಗಾದೆ ಮಾತೊಂದಿದೆ. ಸರ್ವಜ್ಞನು ಕೂಡಾ,

ಒಕ್ಕಲಿಲ್ಲದ ಊರು ! ಮಕ್ಕಳಿಲ್ಲದ ಮನೆಯು
ಲೆಕ್ಕವಿಲ್ಲದನ ವ್ಯವಹಾರ – ಶ್ರವಣಮುನಿ
ಗೊಕ್ಕಲು ಹೋದಂತೆ – ಸರ್ವಜ್ಞ !

ಎನ್ನುವಲ್ಲಿ ಕೃಷಿಯ ಮಹತ್ವ ಅಡಗಿದೆ. ಲಿಂಗದ ಬಗೆಗೆ ಅಂದರೆ ಶಿವನ ಬಗೆಗೆ ಸರ್ವಜ್ಞ ಹೇಳುವ ವಿಚಾರಗಳು ತುಂಬಾ ಕುತೂಹಲಕಾರಿಯಾಗಿವೆ.

ಲಿಂಗದ ಗುಡಿಯೆಲ್ಲಿ? ಲಿಂಗಿಲ್ಲದೆಡೆಯೆಲ್ಲಿ?
ಲಿಂಗದೆ ಜಗವು ಅಡಗಿಹುದು – ಲಿಂಗವನು
ಹಿಂಗಿ ಪರ ಉಂಟೆ ಸರ್ವಜ್ಞ !

ಲಿಂಗವಿಲ್ಲದೆ ಅಂದರೆ ಶಿವ ಇಲ್ಲದ ಜಾಗವೇ ಇಲ್ಲ ಶಿವ ಎಲ್ಲೆಲ್ಲೂ ನೆಲೆಸಿದ್ದಾನೆ ಎನ್ನುತ್ತಾನೆ ಸರ್ವಜ್ಞ. ಶರಣರ ಸಂಗ ಶ್ರೇಷ್ಠ ಎಂದು ಹೇಳುವ ಸರ್ವಜ್ಞ, ಲಿಂಗದ ಸಂಗ ಮಾಡಿದವರೆಲ್ಲರೂ ಶರಣರು ಎನ್ನುತ್ತಾನೆ.

ಲಿಂಗದ ಗುಡಿ ಲೇಸು ! ಗಂಗೆಯ ತಡಿ ಲೇಸು
ಲಿಂಗ ಸಂಗಿಗಳ ನುಡಿ ಲೇಸು, ಶರಣರ
ಸಂಗವೇ ಲೇಸು – ಸರ್ವಜ್ಞ !

ಶರಣ ಜೇಡರ ದಾಸಿಮಯ್ಯ ಅವರು ಹೇಳುವ 'ಶರಣರ ಸೂಳ್ನುಡಿಯ ಒಂದರೆಗಳಿಗೆಯಿತ್ತಡೆ ನಿನ್ನನಿತ್ತೆ ಕಾಣಾ ರಾಮನಾಥ' ಎನ್ನುವ ಮಾತನ್ನು ಈ ವಚನವು ನೆನಪಿಸುತ್ತದೆ. ಶರಣ ಸಂಗ ಶ್ರೇಷ್ಠ ಹಾಗೆಯೇ ಉತ್ತಮರ ಸಂಗ ತೀರ್ಥಕ್ಕೆ ಸಮಾನ ಎನ್ನುತ್ತಾನೆ ಕೆಳಗಿನ ವಚನದಲ್ಲಿ

ಸತ್ಯರ ನುಡಿ ತೀರ್ಥ ! ಮತ್ತೆ ಜಂಗಮ ತೀರ್ಥ
ಉತ್ತಮರ ಸಂಗವದು ತೀರ್ಥ – ಹರಿವ ನೀರೆತ್ತಣ
ತೀರ್ಥ ಸರ್ವಜ್ಞ !

ಸತ್ಯರ ನುಡಿ ತೀರ್ಥ, ಮತ್ತೆ ಜಂಗಮ ತೀರ್ಥ, ಉತ್ತಮರ ಗೆಳೆತನ ಶ್ರೇಷ್ಠ ಎನ್ನುವ ಸರ್ವಜ್ಞ ಮುಂದೆ 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಎನ್ನುತ್ತಾನೆ. ಅನ್ನ ದಾನವೇ ಶ್ರೇಷ್ಠ ದಾನ ಎನ್ನುವ ಕಾಲವೊಂದಿತ್ತು. ಅನ್ನ ನೀಡುವುದು ಶ್ರೇಷ್ಠ ಕೆಲಸ ಎನ್ನುತ್ತಾನೆ ಸರ್ವಜ್ಞ.

ಅನ್ನವನಿಕ್ಕುವುದು ! ನನ್ನಿಯ ನುಡಿವುದು
ತನ್ನಂತೆ ಪರರ ಬಗೆವುದು – ಸ್ವರ್ಗ ತಾ
ಬಿನ್ನಾಣವಲ್ಲ ಸರ್ವಜ್ಞ !

ಅನ್ನವನು ನೀಡುವುದು, ಸತ್ಯವನ್ನು ನುಡಿಯುವುದು, ತನ್ನಂತೆ ಪರರ ಕಂಡರೆ ಅದೇ ಸ್ವರ್ಗ ಎಂದರೆ ತಪ್ಪಾಗಲಾರದು.

ಅನ್ನ ದೇವರ ಮುಂದೆ ! ಇನ್ನು ದೇವರು ಉಂಟೆ
ಅನ್ನ ಉಂಟಾದರುಣುಂಟು ! ಅನ್ನವೇ
ದೈವ ಸರ್ವಜ್ಞ.

ಅನ್ನದ ಬೆಲೆ ಹಸಿದವರಿಗೆ ಮಾತ್ರ ಗೊತ್ತು. ಇವತ್ತು ಕೂಡ ಕೋಟಿ ಕೋಟಿ ಜನ ಹಸಿವು ಎಂಬ ರೋಗದಿಂದ ಸಾಯುತ್ತಿದ್ದಾರೆ. ಆ ರೀತಿ ಹಸಿವಿನಿಂದ ಸಾಯುವವರನ್ನು ಅನ್ನ ಕೊಟ್ಟು ರಕ್ಷಿಸುವುದು ನಮ್ಮ ಕರ್ತವ್ಯ. ಅನ್ನ ದೇವರಾದರೆ, ಅನ್ನ ನೀಡುವವನು ಕೂಡ ದೇವರೆ. ಒಟ್ಟಾರೆಯಾಗಿ ವಚನಕಾರರ ನಂತರ ಬಂದ ಸರ್ವಜ್ಞ ತನ್ನ ವಚನಗಳ ಮೂಲಕ ಸ್ವಾಸ್ತ್ಯ ಸಮಾಜವನ್ನು ನಿರ್ಮಾಣ ಮಾಡುವ ಪ್ರಯತ್ನ ಮಾಡಿದರು.

**ಆಕರ ಗ್ರಂಥಗಳು**


1) ಕನ್ನಡ ಸಾಹಿತ್ಯ ಕೋಶ : ಡಾ ॥ ರಾಜಪ್ಪ ದಳವಾಯಿ
2) ಸರ್ವಜ್ಞನ ವಚನಗಳು : ಸಂ : ಚನ್ನಂಗಿ ಉತ್ತಪ್ಪ
3) ಕಿರಿಯರಿಗೆ ಕನ್ನಡ ಸಾಹಿತ್ಯ ಚರಿತ್ರೆ ಲೇ : ಶ್ರೀ ಆರ್. ಬಸವರಾಜ್

# ಶರಣರ ವಚನಗಳಲ್ಲಿ ಭಕ್ತಿ.

**ಡಾ. ಹೊನ್ನಪ್ಪ ಹೊನ್ನಪ್ಪನವರ**

**ಕನ್ನಡ ಉಪನ್ಯಾಸಕರು**

**ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ**

**ರಾಣೇಬೆನ್ನೂರು**

---

ಭಕ್ತಿ ಎನ್ನುವು ಪದವೇ ರೋಮಾಂಚನಕಾರಿಯಾದದ್ದು. ಭಕ್ತಿಗೆ ಲೋಕದ ಎಲ್ಲಾ ಜಂಜಾಟಗಳನ್ನು ಮರೆಸಿ ಮನುಷ್ಯನನ್ನು ಮತ್ತೊಂದು ಜಗತ್ತಿಗೆ ಕರೆದೊಯ್ಯುವ ಶಕ್ತಿಯಿದೆ. ಇಂದು ದೇವರನ್ನು ಮೆಚ್ಚಿಸಲಿಕ್ಕೆ ಜನ ನಾನಾ ದೊಂಬರಾಟಗಳನ್ನು ಮಾಡುತ್ತಿದ್ದಾರೆ. ಆದರೆ ಈ ಯಾವ ದೊಂಬರಾಟಗಳಿಗೂ ದೇವರು ಒಲಿಯುವುದಿಲ್ಲ. ಯಾಕೆಂದರೆ ಆತ ಹಣ, ಚಿನ್ನ, ಆಹಾರ, ಕುರಿ, ಕೋಳಿ ಪ್ರಿಯನಲ್ಲ. ಆತ ಭಕ್ತಿ ಪ್ರಿಯ ಅದನ್ನು ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಸೊಗಸಾಗಿ ಹೇಳಿದ್ದಾರೆ.

" ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯ,
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯ,
ನಾದವ ಮಾಡಿದ ರಾವಣಗೆ ಆಕೆಯಾಯುಷ್ಯವಾಯಿತು,
ವೇದವನೋದಿದ ಬ್ರಹ್ಮನ ಶಿರಹೋಯಿತು,
ನಾದ ಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ,
ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವಾ"

ಭಕ್ತಿ ಅಂತರಂಗಕ್ಕೆ ಸಂಬಂಧಿಸಿದ ವಿಚಾರ ಅಂತರಂಗದ ಪರಿಶುದ್ಧವಾಗದೆ ಹೊರತು ಭಕ್ತಿಗೆ ಅರ್ಥವಿಲ್ಲ. ಭಕ್ತಿ ಇಂದು ಆಡಂಬರದ ರೂಪವನ್ನು ಪಡೆದುಕೊಂಡಿದೆ. ಅಂತರಂಗ ಕಲುಷಿತವಾಗಿರುವ ಈ ಹೊತ್ತಿನಲ್ಲಿ ಶರಣರ ಓದು, ಶರಣರ ಮಾರ್ಗ ದರ್ಶನ ಅತಿ ಅವಶ್ಯವೆನಿಸಿದೆ. ಮನುಷ್ಯ ಹಾಗೂ ದೇವರ ಮಧ್ಯದಲ್ಲಿ ಶಕ್ತಿಯಾಗಿ ಕೆಲಸ ಮಡುವುದೆ ಈ ಭಕ್ತಿ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೆ ಬೀಜ
ಎನಗುಳ್ಳದೊಂದು ಮನ ಆ ಮನ
ನಿಮ್ಮಲ್ಲಿ ಸಿಲುಕಿದ ಬಳಿಕ ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನ.

ಮನಸ್ಸು ದೇವರಲ್ಲಿ ಲೀನವಾದ ಮೇಲೆ ಭಯವಾಗಲಿ, ಭವವಾಗಲಿ ಇಲ್ಲವೆನ್ನುತ್ತಾರೆ ಅಕ್ಕಮಹಾದೇವಿ ಮನ ದೇವರಲ್ಲಿ ಲೀನವಾಗುವ ಹಾಗೆ ಮಾಡುವುದೆ ಈ ಭಕ್ತಿ.

ಲೋಕದ ಭಜನೆಯಲ್ಲಿ ಸಿಲುಕಿದಡೆ

ಜನನ ಮರಣ ಬಿಡುವುದೆ ಚೆನ್ನಮಲ್ಲಿಕಾರ್ಜುನ

ಲೋಕದ ಜಂಜಾಟದಲ್ಲಿ ಸಿಕ್ಕಿಹಾಕಿಕೊಂಡವರಿಗೆ ಜನನ – ಮರಣದಿಂದ ಬಿಡುಗಡೆಯಿಲ್ಲ ಎನ್ನುತ್ತಾರೆ ಅಕ್ಕಮಹಾದೇವಿ. ಭಕ್ತಿಯನ್ನು ಹೊಸ ನೆಲೆಯಲ್ಲಿ ನೋಡಬೇಕಾಗಿದೆ. ಹಾಗೆ ನೋಡಿದರೆ ಶ್ರವಣಕುಮಾರ ತಂದೆ – ತಾಯಿಯನ್ನು ಹೊತ್ತು ತಿರುಗಿದ್ದು ಕೂಡ ಭಕ್ತಿಯೆ. ಗಾಂಧೀಜಿ ರಾತ್ರಿ ಹನ್ನೇರಡರವರೆಗೂ ತನ್ನ ತಂದೆಯವರ ಸೇವೆ ಮಾಡಿದ್ದು ಕೂಡ ಭಕ್ತಿಯೆಂದೆ ವ್ಯಾಖ್ಯಾನಿಸಬೇಕು. ಶರಣರು ಕೂಡ ಭಕ್ತಿಯನ್ನು ಹೊಸ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಿದರು.

ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿ ಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ.

ಜೇಡರ ದಾಸಿಮಯ್ಯ ಅವರು ಈ ವಚನದಲ್ಲಿ ಗಂಡ – ಹೆಂಡತಿತರು ಅನ್ಯೋನ್ಯವಾಗಿ ಇರುವುದೆ ನಿಜವಾದ ಭಕ್ತಿ ಎನ್ನುತ್ತಾರೆ. ಭಕ್ತಿ ಶ್ರೇಷ್ಠವೆನಿಸಿಕೊಳ್ಳುವುದು ನಮ್ಮ ಮನೆಯೊಡೆಯ ಸರಿಯಿದ್ದಾಗ. ನಮ್ಮ ಮನೆಯೊಡೆಯ ಸರಿಯಿರದೆ ಪೂಜೆ, ಜಪ, ತಪಗಳು ನಿರರ್ಥಕವಾಗಿ ನಾವೆಲ್ಲಾ ಡಾಂಭಿಕ ಭಕ್ತರೆನಿಸಿಕೊಳ್ಳುತ್ತೇವೆ. ಇದನ್ನೆ ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ.

ಮನೆಯೊಳಗೆ ಮನೆಯೊಡಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲಾ
ಕೂಡಲಸಂಗಮದೇವಾ.

ಬಸವಣ್ಣನವರ ಪ್ರಕಾರ ಮನದೊಳಗೆ ಅರಿಷಡ್ವರ್ಗಗಳನ್ನು ತುಂಬಿಕೊಂಡಿದ್ದೇವೆ. ಅವುಗಳನ್ನು ತುಂಬಿಕೊಂಡು ಮಾಡುವ ಭಕ್ತಿ ನಿಷ್ಪ್ರಯೋಜಕವಾಗುತ್ತದೆ. ಭಕ್ತನಿಗೂ ಪರಮಾತ್ಮನಿಗೂ ಸೇತುವೆ ಶರಣ. ಅವನ ಕೃಪೆಯಿಂದ ಭಕ್ತ ಪರಮಾತ್ಮನನ್ನು ಕರತಲಮಲಾಕ ಮಾಡಿಕೊಳ್ಳಬಲ್ಲ. ಆದರೆ ನಾವು ಶರಣರ ಮೊರೆ ಹೋಗಿ ಶಿವನನ್ನು ಕಾಣುವ ಬದಲು ಲೌಕಿಕ ಜೀವನದಲ್ಲಿ ಕಳೆದು ಹೋಗುತ್ತಿದ್ದೇವೆ.

ಬಡತನಕ್ಕೆ ಉಣ್ಬುವ ಚಿಂತೆ, ಉಣ್ಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,

ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಸಾವಿನ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರನು ಕಂಡೆನು
ಶಿವನ ಚಿಂತೆಯಲ್ಲಿದ್ದವರೊಬ್ಬರನು ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಅಂಬಿಗರ ಚೌಡಯ್ಯ ಅವರ ಮೇಲಿನ ವಚನದಲ್ಲಿ ಇಂದಿನ ಜನಸಮುದಾಯ ಯಾವ ದಿಕ್ಕಿನ ಕಡೆಗೆ ಹೊರಟಿದೆ ಎನ್ನುವುದನ್ನು ಸ್ಪಷ್ಟವಾಗಿ ಕಾಣಬಹುದು. ಇಂದಿನ ಜನ ಬಟ್ಟೆ, ಆಹಾರ, ಸಂಗ್ರಹ ಪ್ರವೃತ್ತಿಯಲ್ಲಿ ಕಳೆದು ಹೋಗುತ್ತಿದ್ದಾರೆ. ಇದೇ ರೀತಿಯಲ್ಲಿ ಜನ ಮುಂದುವರೆದರೆ ಅವರ ಬದುಕಿನ ಶಾಂತಿ, ನೆಮ್ಮದಿಗಳಿಂದ ವಂಚಿತರಾಗುವ ಸಾಧ್ಯತೆಯೆ ಜಾಸ್ತಿ. ಹಾಗಾಗಿ ಜನ ಶಾಂತಿ, ನೆಮ್ಮದಿಯ ಹಿನ್ನೆಲೆಯಲ್ಲಿ ಯೋಚಿಸಿದರೆ ಶಿವನ ಮೊರೆ ಅಂದರೆ ಭಕ್ತಿಯ ಮಾರ್ಗದಿಂದ ಮಾತ್ರ ಅದು ಸಾಧ್ಯವೆಂದು ಹೇಳಬಹುದು. ಡಾಂಭಿಕ ಭಕ್ತಿ ಬಗೆಗೆ ಶರಣರು ಕೆಲವೊಂದು ಮಾರ್ಮಿಕ ಮಾತುಗಳನ್ನು ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ.

ಎನಿಸು ಕಾಲ ಕಲ್ಲು ನೀರೊಳಗಿದ್ದರೇನು?
ನೆನೆದು ಮೃದುವಾಗಬಲ್ಲುದೆ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ !
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ !

ಬಸವಣ್ಣ ಅವರ ಪ್ರಕಾರ ಕಲ್ಲು ಎಷ್ಟು ವರ್ಷಗಳ ಕಾಲ ನೀರೊಳಗಿದ್ದರು ಅದು ನೆನೆದು ಹೇಗೆ ಮೃದುವಾಗುವುದಿಲ್ಲವೋ ಹಾಗೆಯೇ ಮನದಲ್ಲಿ ದೃಢವಿಲ್ಲದೆ ಹೋದರೆ ಆ ಭಕ್ತಿಯು ಭೂಮಿಯೊಳಗೆ ಹೂತಿಟ್ಟಿರುವ ಹೊನ್ನನ್ನು ಭೂತ ಕಾಯ್ದಂತೆ ಎನ್ನುತ್ತಾರೆ. ಬಸವಣ್ಣನವರು ಶಿವನನ್ನು ಕಾಣಲು ಭಕ್ತಿಯ ಮಾರ್ಗದಲ್ಲಿ ನಡೆಯುವಾಗ ಮನದ ಏಕಾಗ್ರತೆ ಬಹಳ ಮುಖ್ಯವಾಗುತ್ತದೆ.

ಹರಿದ ಗೋಣೆಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕಂಜಿ
ಕಳವೆಯಲ್ಲಾ ಹೋಗಿ ಬರಿ ಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ಕಾಣಾ ! ರಾಮನಾಥ

ಅಳಿಮನದವನ ಭತಿಗೆ ದಾಸಿಮಯ್ಯ ಕೊಡುವ ಹೋಲಿಕೆಗಳು ತುಂಬಾ ಸೊಗಸಾಗಿದೆ. ಇಲ್ಲೊಬ್ಬ ಭಕ್ತ ಹರಿದ ಗೋಣಿ ಚೀಲದಲ್ಲಿ ಭತ್ತವನ್ನು ತುಂಬಿ ಸುಂಕವನ್ನು ಕೊಡಬೇಕಾಗುತ್ತದೆಂದು ರಾತ್ರಿಯೆಲ್ಲ ನಡೆದು ಬೇರೆ ಊರನ್ನು ತಲುಪುವುದರೊಳಗೆ ಆತನ ಗೋಣಿಚೀಲದಲ್ಲಿದ್ದ ಭತ್ತವೆಲ್ಲ ಹೋಗಿ ಬರೀ ಗೋಣಿ ಚೀಲ ಉಳಿಯುತ್ತದೆ. ಅಳಿಮನದಿಂದ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದರೆ ಹರಿದ ಗೋಣಿ ಚೀಲದಲ್ಲಿ ಭತ್ತವನ್ನು ತುಂಬಿ ರಾತ್ರಿಯೆಲ್ಲ ನಡೆದರೆ ಏನಾಗುತ್ತದೆಯೊ ಅದೇ ಸ್ಥಿತಿಯಾಗುತ್ತದೆ. ಹಸಿದವರಿಗೆ ಅನ್ನ ಕೊಡುವುದೆ ಭಕ್ತಿ ಎನ್ನಬಹುದು ಜನರ ಮೌಢ್ಯತೆಯನ್ನು, ಬೂಟಾಟಿಕೆಯನ್ನು ಭಕ್ತಿ ಎಂದು ಒಪ್ಪಲು ಆಗುವುದಿಲ್ಲ.

ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು,
ದಿಟದ ನಾಗರ ಕಂಡರೆ ಕೊಲೆಂಬರಯ್ಯಾ !
ಉಂಬ ಜಂಗಮ ಬಂದರೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲಸಂಗನ ಶರಣರ ಕಂಡುದಾಸೀನವ
ಮಾಡಿದರೆ, ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಎಂತಹ ಕಟು ವಾಸ್ತವವನ್ನು ಬಸವಣ್ಣನವರು ಇಲ್ಲಿ ತೆರೆದಿಟ್ಟಿದ್ದಾರೆ. ಬಾಯಾರಿ ಬಂದವನಿಗೆ ನೀರು ಕೊಡುವುದು, ಹಸಿದು ಬಂದವನಿಗೆ ಅನ್ನ ಕೊಡುವುದು, ಪ್ರಾಣಿ – ಪಕ್ಷಿಗಳನ್ನು ಕೊಲ್ಲದಿರುವುದು ಭಕ್ತಿಯ ಲಕ್ಷಣಗಳಲ್ಲೊಂದು. ಭಕ್ತಿಯ ಬಗೆಗೆ ಇದೊಂದು ಹೊಸ ವ್ಯಾಖ್ಯಾನವೆಂದರೆ ತಪ್ಪಾಗಲಾರದು. ಬಸವಣ್ಣನವರೆ ತಮ್ಮದೊಂದು ವಚನದಲ್ಲಿ 'ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು' ಎನ್ನುತ್ತಾರೆ. ಭಕ್ತ ಹೇಗಿರಬೇಕು? ಭಕ್ತನ ಲಕ್ಷಣಗಳೇನು? ಶರಣರು ತಮ್ಮ ವಚನಗಳಲ್ಲಿ ಹೇಳುವ ರೀತಿಯನ್ನು ಗಮನಿಸಬೇಕು.

ತನಗೆ ಮುನಿದರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೆಯೇನು?
ತನುವಿನ ಕೋಪ ತನ್ನ ಹಿರಿತನದ ಕೇಡು !
ಮನದ ಕೋಪ ತನ್ನರುಹಿನ ಕೇಡು !
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ !

ಭಕ್ತನಾದವನಿಗೆ ತಾಳ್ಮೆ ಬಹಳ ಮುಖ್ಯ. ಆತ ತನ್ನ ಮೇಲೆ ಯಾರಾದರೂ ಮುನಿಸಿಕೊಂಡರೆ ಅವರ ಮೇಲೆ ಮುನಿಸಿಕೊಳ್ಳಬಾರದು. ಆ ರೀತಿ ಮುನಿಸಿಕೊಂಡರೆ ಆತನ ಭಕ್ತಿ ಎಂಬ ಹಿರಿತನಕ್ಕೆ ಕೇಡಾಗುತ್ತದೆ. ಹಾಗೆ ತನ್ನ ಮನದ ಕೋಪ ತನ್ನ ಅರಿವಿಗೆ ಕೇಡಾಗುತ್ತದೆ.

" ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ
ಮೃದು ವಚನವೇ ಸಕಲ ಜಪಂಗಳನ್ನು
ಮೃದು ವಚನವೇ ಸದಾಶಿವನ ಬಲುಮೆಯಯ್ಯ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ"

ವಿನಯವಂತಿಕೆ ಹಾಗೂ ಸೌಜನ್ಯಗಳು ಭಕ್ತನ ಲಕ್ಷಣಗಳು. ಕೋಪ, ಆಹಂಕಾರಗಳು ಭಕ್ತಿಯ ಕುರುಹುಗಳಲ್ಲ. ಬಸವಣ್ಣನವರ ಪ್ರಕಾರ ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ. ಮಾತಿನಲ್ಲಿ ನಯ, ವಿನಯಗಳು ಮುಖ್ಯ ಎನ್ನುತ್ತಾರೆ ಬಸವಣ್ಣನವರು. ಭಕ್ತನು ಶಾಂತನಾಗಿರುವುದರ ಜೋತೆಗೆ ಸಕಲ ಜೀವಿಗಳನ್ನು ತನ್ನಂತೆ ಎಂದು ಭಾವಿಸುವವನು ಭಕ್ತನಾಗಬಲ್ಲ. ಸಕಲ ಜೀವಿಗಳಿಗೂ ಲೇಸನ್ನು ಬಯಸುವ ನಮ್ಮ ಕೂಡಲಸಂಘನ ಶರಣರೆ ನಮ್ಮ ಕುಲಜರು' ಎನ್ನುವಲ್ಲಿ ಒಬ್ಬ ಶ್ರೇಷ್ಠ ಭಕ್ತನಿದ್ದಾನೆ. ಅಸಂಗ್ರಹ ಪ್ರವತ್ತಿಯಾ ಕಂಡ ಭಕ್ತಿಯೆ ಸಂಗ್ರಹ ಪ್ರವೃತ್ತಿಯನ್ನು ಶರಣರು ಒಪ್ಪುವುದಿಲ್ಲ ಸಂಗ್ರಹ ಮಾಡುವು ಗುಣವುಳ್ಳವುರು ಭಕ್ತರಲ್ಲ. ಸಂಗ್ರಹ ಪ್ರವೃತ್ತಿಯು ಭಕ್ತಿಗೆ ತೊಡಕನ್ನುಂಟುಮಾಡುತ್ತದೆ. ಆದಕ್ಕೆ ಬಸವಣ್ಣನವರು ಸಂಗ್ರಹ ಪ್ರವೃತ್ತಿಯನ್ನು ಎಂದು ಒಪ್ಪಲಿಲ್ಲ.

ಅನ್ನದೋಳಗೊಂದಗುಳ ಚಿನ್ನದೊಳಂದೊರೆಯ
ವಸ್ತ್ರದೊಳಗೊಂದಳೆಯ, ಇದಿಂಗೆ ನಾಳಿಂಗೆ
ಎನ್ನ ಮಡದಿ ಮಕ್ಕಳಿಗೆ ಕೂಡಿಟ್ಟೆನಾದೊಡೆ ನಿಮ್ಮಾಣೆ.
ಆಯ್ದಕ್ಕಿ ಲಕ್ಕಮ್ಮ ತನ್ನ ಒಂದು ವಚನದಲ್ಲಿ ಭಕ್ತಿಯ ಗುಣ ಲಕ್ಷಣಗಳನ್ನು ಹೀಗೆ ಹೇಳುತ್ತಾರೆ
ಆಸೆಯೆಂಬದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ,
ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ,

ಆಸೆ ಎನ್ನುವುದು ಅರಸನಿಗೆ ಇರಬೇಕೆ ಹೊರತು ಶಿವಭಕ್ತನಿಗೆ ಇರಬಾರದು ಆಸೆಯನ್ನು ಹೊಂದಿರುವುದು ಭಕ್ತಿಯ ಲಕ್ಷಣವಲ್ಲ, ಅತಿಯಾದ ಸಂಗ್ರಹವನ್ನು ಈಶ್ವರ ಒಪ್ಪುವುದಿಲ್ಲ ಎನ್ನುತ್ತಾರೆ. ಲಕ್ಕಮ್ಮ.

ಮನ ಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ.
ಚಿತ್ತ ಶುದ್ಧದಲ್ಲಿ ಕಾಯಕದ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದರತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ.

ಅಂತಿಮವಾಗಿ ಮನ ಶುದ್ಧವಿಲ್ಲದವರಿಗೆ ಎಲ್ಲಾ ರೀತಿಯ ಬಡತನ ಕಾಡುತ್ತದೆ. ಚಿತ್ತ ಶುದ್ಧದಲ್ಲಿ ಕಾಯಕವ ಮಾಡಿದರೆ ಸದ್ಭಕ್ತನಿಗೆ ಎಲ್ಲವು ದೊರಕುತ್ತದೆ. ಒಟ್ಟಾರೆಯಾಗಿ ಭಕ್ತಿಯು ಮನುಷ್ಯನನ್ನು ಲೌಕಿಕ ಜಂಜಾಟಗಳಿಂದ ಬಿಡಿಸಿ, ಆನಂದ, ನೆಮ್ಮದಿ, ಮುಕ್ತಿಯ ಕಡೆಗೆ ಕರೆದೊಯ್ಯುತ್ತದೆ.

**ಗ್ರಂಥ ಋಣ**


1) ವಚನ ಸಾಹಿತ್ಯ ಸಂಗ್ರಹ : ಸಂ : ಸಂ ಶಿ. ಭೂಸನೂರಮಠ
2) ಕನ್ನಡ ಸಾಹಿತ್ಯ ಕೋಶ : ಡಾ ॥ ರಾಜಪ್ಪ ದಳವಾಯಿ
3) ಬಸವಯುಗದ ವಚನ ಮಹಾಸಂಪುಟ : ಸಂ : ಡಾ ॥ ಎಂ. ಎಂ. ಕಲಬುರ್ಗಿ
4) ಬಸವೋತ್ತರಯುಗದ ವಚನ ಮಹಾಸಂಪುಟ : ಸಂ : ಡಾ॥ ಎಂ. ಎಂ. ಕಲಬುರ್ಗಿ
5) ಕಿರಿಯರಿಗೆ ಕನ್ನಡ ಸಾಹಿತ್ಯ ಚರಿತ್ರೆ : ಲೇ : ಶ್ರೀ. ಆರ್. ಬಸವರಾಜ್


# ವಚನ ಸಾಹಿತ್ಯದಲ್ಲಿ ಕೃಷಿ


**ಡಾ. ಹೊನ್ನಪ್ಪ ಹೊನ್ನಪ್ಪನವರ**
**ಕನ್ನಡ ಉಪನ್ಯಾಸಕರು**
**ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ**
**ರಾಣೇಬೆನ್ನೂರು**


---

ಹನ್ನೆರಡನೆಯ ಶತಮಾನದ ಬಸವಾದಿ ಶರಣರು ನೀಡಿದಂತಹ ತತ್ವಗಳಲ್ಲಿ ಕಾಯಕ ಮತ್ತು ದಾಸೋಹ ಪ್ರಮುಖವಾಗಿವೆ. ಇವು ಅಜರಾಮರವಾದ ಮತ್ತು ಸಾರ್ವಕಾಲಿಕ ಮಹತ್ವವನ್ನು ಪಡೆದಿರುವಂತಹಗಳಾಗಿವೆ. ಮಾನವೀಯ ಮೌಲ್ಯಗಳು ಅಧಃಪತನಕ್ಕಿಳಿಯುತ್ತಿರುವ ಇಂದಿನ ಸಂದರ್ಭದಲ್ಲಿ ಜೀವನ ಮೌಲ್ಯಗಳು ಹಾಗೂ ಸದ್ವಿಚಾರಗಳಿಂದ ಕೂಡಿರುವ ಕಾಯಕ ಮತ್ತು ದಾಸೋಹ ತತ್ವಗಳು ಮಾನವನನ್ನು ಸತ್ಪಥದಲ್ಲಿ ನಡೆಸಲು ಅಗತ್ಯವಾದವುಗಳಾಗಿವೆ. ವಚನಕಾರರು ಕಾಯಕ ನಿಷ್ಠೆಯನ್ನು ಮಾನವ ಬದುಕಿನ ಉತ್ತುಂಗ ಸ್ಥಿತಿ ಎಂದು ಪ್ರತಿಪಾದಿಸಿದರು. ಅಲ್ಲದೆ ಹುಸಿ ವಿಚಾರಗಳು, ತೋರಿಕೆಯ ಭಕ್ತಿ, ಡಾಂಭಿಕತೆಗಳನ್ನು ಬಲವಾಗಿ ಖಂಡಿಸಿದರು. ವಚನಕಾರರು ತಮ್ಮ ವಚನಗಳಲ್ಲಿ ಭಕ್ತಿ, ಕಾಯಕ ನಿಷ್ಠೆ, ವ್ಯಕ್ತಿ ಗೌರವ, ದೇವೋಪಾಸನೆ, ಮೌಢ್ಯಖಂಡನೆ, ಅಸ್ಪೃಶ್ಯತಾ ನಿವಾರಣೆ ಹೀಗೆ ಮುಂತಾದ ವಿಚಾರಗಳಲ್ಲಿ ಅಂದಿನ ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಈ ಎಲ್ಲ ವಿಚಾರಗಳ ಜೊತೆಗೆ ಈ ದೇಶದ ಮುಖ್ಯ ಕಸುಬಾದ ಕೃಷಿ ಅಥವಾ ವ್ಯವಸಾಯದ ಬಗೆಗೂ ತಮ್ಮ ವಚನಗಳಲ್ಲಿ

ಚರ್ಚಿಸಿದ್ದಾರೆ. ಬಸವಣ್ಣ ಹಾಗೂ ಅವರ ಸಮಕಾಲೀನ ವಚನಕಾರರು ಕೃಷಿ ಬಗೆಗೆ ಹೇಳಿರುವ ವಿಚಾರಗಳನ್ನು ಈ ಲೇಖನದಲ್ಲಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ.

ಕೃಷಿಗೆ ಸಂಬಂಧಿಸಿದ ವಚನಗಳ ಬಗೆಗೆ ಚರ್ಚಿಸುವಾಗ ಮೊದಲು ನೆನಪಿಗೆ ಬರುವ ಹೆಸರೆ ಒಕ್ಕಲಿಗ ಮುದ್ದಣ್ಣ. ಈತ ಜೋಳದಹಾಳಿ ಎಂಬ ಗ್ರಾಮದ ಭಕ್ತ, ಕೃಷಿ ಕಾಯಕದ ಮೂಲಕ ಜಂಗಮ ದಾಸೋಹ ನಡೆಸುವುದು ಇವನ ವ್ರತ. ಕೃಷಿಕನಾದ ಇವನು ಹೊಲದಲ್ಲಿ ಹೂಡಿದ ನೇಗಿಲಿಗೆ ಹತ್ತಿದ ಲಿಂಗವನ್ನು ಹೊರ ತೆಗೆದು ಪೂಜಿಸಿ, ಲಿಂಗದೀಕ್ಷೆ ಪಡೆದ. ಆತ ತಾನು ಒಕ್ಕಲಿಗನ ಮಗ ಎನ್ನುವುದನ್ನು ತನ್ನದೊಂದು ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ.

ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ,
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.

ಎಂದು ಒಕ್ಕಲಿಗರು ಮಕ್ಕಳು ಎಂದು ಹೇಳಿಕೊಳ್ಳಲಿಕ್ಕೆ ನಾಚಿಕೆಪಡುತ್ತಿರುವ ಇಂದಿನ ದಿನಮಾನಗಳ ಜನರಿಗೆ ಮುದ್ದಣ್ಣ ಮಾದರಿಯಾಗಬೇಕಾಗಿದೆ. ನಾನು ವೇದಶಾಸ್ತ್ರಗಳನ್ನು ಓದುವ ಬ್ರಾಹ್ಮಣನಲ್ಲ, ಯುದ್ಧ ಮಾಡಿ ಗೆದ್ದು ಬೀಗುವುನೆಂದರೆ ನಾನು ಕ್ಷತ್ರಿಯನೂ ಅಲ್ಲ, ವ್ಯವಹಾರ ಮಾಡಲು ನಾನು ವೈಶ್ಯನೂ ಮೊದಲೆ ಅಲ್ಲ. ನಾನೊಬ್ಬ ಸಾಮಾನ್ಯ ಒಕ್ಕಲಿಗನ ಮಗ ರೈತನ ಮಗ ಎಂಬುದನ್ನು ಶಿವ ಸಾಕ್ಷಿಯಾಗಿ ಸಾಕ್ಷಿತ್ಕರಿಸುತ್ತೇನೆ.

ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಒಲಿದು ಉಂಡು
ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ.

ಎಂದು ಹೇಳುವಾಗ ಒಕ್ಕಲಿಗ ಮುದ್ದಣ್ಣನಿಗೆ ಕೃಷಿಗೆ ಸಂಬಂಧಿಸಿದ ವಸ್ತುಗಳೇ ದೇಹದ ಭಾಗಗಳಾಗಿ, ಧರ್ಮ ಲಿಂಗವಾಗಿ, ವಿಶ್ವಾಸವಾಗಿ ಕಾಣುವುದನ್ನು ನೋಡಿದರೆ ಆತ ಕೃಷಿಯ ಮೂಲಕವೇ ಭಕ್ತಿಯ ಮಾರ್ಗವನ್ನು ಕಂಡುಕೊಂಡ ಮಹಾಶರಣ ಎನ್ನುವುದು ಅರಿವಿಗೆ ಬರುತ್ತದೆ. ಈ ವಚನದಲ್ಲಿ ಮುದ್ದಣ್ಣ ಅಂಗ ಲಿಂಗ ಸಂಬಂಧವನ್ನು ಕೃಷಿಗೆ ಅನ್ವಯಿಸಿ ಹೇಳುತ್ತಾನೆ. ಅಂಗ – ಲಿಂಗ ಸಂಬಂಧದಿಂದ ಕೃಷಿ ಮಾಡಿದರೆ ದೇವಾನುಗ್ರಹದಿಂದ ಒಳ್ಳೆಯ ಬೆಳೆ ಬರುತ್ತದೆ ಎಂಬುದು ಅವನ ನಂಬಿಕೆ. ಇದರಿಂದ ಅವನಿಗಾಗಿರುವ ಲಾಭ

ನೀ ಕೊಟ್ಟ ಭೂಮಿಗೆ ಮುಂದೆ ಕರಲು,
ಹಿಂದೆ ಇಗ್ಗರಲು ಅಲ್ಲಿಂದ ಅಚೆ ಮಧ್ಯಭೂಮಿ.
ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ,
ಇದಾರ ವಶವೂ ಅಲ್ಲ,

ಕಾಮಬೀಮ ಜೀವಧನದೊಡೆಯ ನೀನೆ ಬಲ್ಲೆ

[ ಕರಲು – ಚೌಳುಭೂಮಿ, ಉಪ್ಪುಭೂಮಿ, ಇಗ್ಗರಲು – ಉಪದ್ರವ, ಕಾಟ ]

ಎಂದು ಮುದ್ದಣ್ಣ ಹೇಳುವಾಗ, ನೀ ಕೊಟ್ಟ ಭೂಮಿ ಎನ್ನುವಲ್ಲಿ ಭಕ್ತಿಯ ಭಾವನೆ ಎದ್ದು ಕಾಣುತ್ತದೆ. ಶಿವ ಕೊಟ್ಟ ಭೂಮಿಯಲ್ಲಿ ಮುಂದೆ ಉಪ್ಪು ಭೂಮಿಯಿದೆ, ಇನ್ನೊಂದು ಕಡೆ ಉಪದ್ರವದ ಭೂಮಿಯಿದೆ. ಎನ್ನುವಲ್ಲಿ ಭೂಮಿಯಲ್ಲಿ ವೈವಿಧ್ಯವಿದೆ ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕೃಷಿ ಮಾಡಿದರೆ ಉತ್ತಮ ಬೆಳೆ ತೆಗೆಯಬಹುದು ಎನ್ನುತ್ತಾನೆ. 'ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ ಮುಂದಣ ಫಲದೊಳಗರಿಸಿಕೋ' ಎಂಬ ಚನ್ನ ಬಸವಣ್ಣನ ಮಾತಿನ ಹಾಗೆ ಕೃಷಿ ಕಾರ್ಯ ಮಾಡಬೇಕು ಎನ್ನುತ್ತಾನೆ.

ಪೈರಿಗೆ ಅರಿವು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು,
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು,
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರಿನೊಳಕೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮ ಜೀವಧನನೊಡೆಯನೆಂಬುದು ಭಾವಿಸಲಿಲ್ಲ.

ಪೈರಿಗೆ ನೀರನ್ನು ಸರಿಯಾಗಿ ಬಿಡಬೇಕು. ಇಲ್ಲದಿದ್ದರೆ ಫಸಲು ಕೆಟ್ಟು ಹೋಗುತ್ತದೆ. ಹಾಗೆಯೇ ಕೃಷಿ ಜ್ಞಾನವನ್ನು ಅರಿಯಬೇಕು. ಕ್ರಿಯೆಯನ್ನು ಬಿಡದೆ, ಅದಕ್ಕೆ ಸಂಬಂಧಿಸಿದ ಅರಿವನ್ನು ಬಿಡದೆ ಮಾಡಿದರೆ ಉತ್ತಮ ಫಲ ದೊರಕುತ್ತದೆ ಎನ್ನುತ್ತಾನೆ ಒಕ್ಕಲಿಗ ಮುದ್ದಣ್ಣ. ಒಕ್ಕಲಿಗ ಮುದ್ದಣ್ಣನ ಹಾಗೆ ಕೃಷಿ ವಚನಗಳನ್ನು ಬರೆದ ಇನ್ನೂ ಕೆಲವರಿದ್ದಾರೆ ಅದರಲ್ಲಿ ಉರಿಲಿಂಗ ಪೆದ್ದಿಯನ್ನು ಗಮನಿಸಬಹುದು.

'ಯಥಾ ಭೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು.
ಕಲ್ಪವೃಕ್ಷದ ಬೀಜದಿಂದಾದ ಸಸಿ, ಕಲ್ಪವೃಕ್ಷವಪ್ಪುದು ತಪ್ಪುದು
ದಿಟದಿಟ ತಪ್ಪದು ನೋಡಾ
ಕಾಮದೇನುವಿನ ಶಿಶು ಕಾಮಧೇನುವಪ್ಪುದು ತಪ್ಪದು,
ದಿಟದಿಟ ನೋಡಾ
ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ತಪ್ಪದು,
ದಿಟದಿಟ ನೋಡಾ

'ಯಥಾಬೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು
ಶಿವನೇ ಬಲ್ಲನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

'ಯಥಾ ರಾಜ ತಥಾ ಪ್ರಜಾ', ಯಥಾ ಗುರು ತಥಾ ಶಿಷ್ಯ ಎನ್ನುವ ಲೋಕರೂಢಿಯ ಮಾತಿನಂತೆ ಉರಿಲಿಂಗ ಪೆದ್ದಿಯು ತನ್ನ ವಚನದಲ್ಲಿ ಬೀಜ ಚೆನ್ನಾಗಿದ್ದರೆ ಅದರಿಂದ ಬರುವ ಚಿಗುರು ಸೊಗಸಾಗಿರುತ್ತದೆ. ಕಲ್ಪವೃಕ್ಷದ ಬೀಜದಿಂದಾದ ಸಸಿ, ಕಲ್ಪವೃಕ್ಷವಾಗುತ್ತದೆ ಹಾಗೇಯೆ ಕಾಮಧೇನುವಿನ ಕಾಮದೇನುವೇ ಆಗುತ್ತದೆ. ಶ್ರೇಷ್ಠ ಗುರುವಿನಿಂದ ಶ್ರೇಷ್ಠ ಶಿಷ್ಯನೆ ಉದಯವಾಗುತ್ತಾನೆ ಎನ್ನುವ ಮಾತನ್ನು ಶಿವನು ಕೂಡ ಬಲ್ಲ ಎನ್ನುತ್ತಾನೆ ಉರಿಲಿಂಗ ಪೆದ್ದಿಪ್ರಿಯ.

ಮಹಿಳಾ ಸ್ವಾತಂತ್ರ್ಯದ ಮೊದಲ ಧ್ವನಿಯಾಗಿ ಕಂಡುಬರುವ ಅಕ್ಕಮಹಾದೇವಿ ಕೂಡ ಕೃಷಿ ಸಂಬಂಧಿಸಿದ ವಚನಗಳನ್ನು ರಚನೆ ಮಾಡಿದ್ದಾರೆ.

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದವನೆರೆದವರಾರಯ್ಯ?
ರಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ,
ತನ್ನ ಪರಿ ಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು

[ ಕಳವೆ – ಭತ್ತ, ರಾಜಾನ್ನ – ಒಂದು ಬಗೆಯ ಶ್ರೇಷ್ಠ ಜಾತಿಯ ಭತ್ತ ಮತ್ತು ಅದರ ಅನ್ನ,
ಶಾಲ್ಯನ್ನ – ಉತ್ತಮ ಅಕ್ಕಿಯಿಂದ ಮಾಡಿದ ಅನ್ನ ]

ಹೀಗೆ ಕೃಷಿಗೆ ಸಂಬಂಧಿಸಿದ ಹತ್ತಾರು ಸಂಗತಿಗಳನ್ನು ಬಳಸಿಕೊಂಡು ರಚಿಸಿರುವ ಈ ವಚನದಲ್ಲಿ ಪ್ರಕೃತಿಯ ಎಲ್ಲ ಬೆಳೆಗಳಿಗೆ, ಅವುಗಳಲ್ಲಿರುವ ವಿಶೇಷತನಗಳಿಗೆ ನನ್ನ ದೇವರಾಗಿರುವ ಚೆನ್ನಮಲ್ಲಿಕಾರ್ಜುನನೆ ಬೇರಾಗಿದ್ದಾನೆ (ಮೂಲ) ಎನ್ನುತ್ತಾರೆ ಅಕ್ಕಮಹಾದೇವಿ.

ಅನುಭವ ಮಂಟಪದ ಅಧ್ಯಕ್ಷರಾಗಿದ್ದ ಹಾಗೂ ಬೆಡಗಿನ ವಚನಕಾರ ಅಲ್ಲಮಪ್ರಭುವಿನ ವಚನಗಳಲ್ಲೂ ಕೂಡ ಕೃಷಿ ವಿಚಾರಗಳು ಕಂಡುಬರುತ್ತವೆ.

ತನುವ ತೋಟವ ಮಾಡಿ
ಮನವ ಗುದ್ದಲಿ ಮಾಡಿ,
ಅಗೆದು ಕೆಳೆದನಯ್ಯ ಭ್ರಾಂತಿಯ ಬೇರೊಡೆದು
ಸಂಸಾರದ ಹೆಂಟೆಯ ಬಗಿದು
ಬಿತ್ತಿದೆನಯ್ಯ ಬ್ರಹ್ಮಜೀವವ !
ಅಖಂಡ ಮಂಡಲವೆಂಬ ಭಾವಿ
ಪವನವೇ ರಾಟಾಳ !
ಸುಷುಮ್ನ ನಾಳದಿಂದವೆ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು,
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಆ ತೋಟದೊಳಗೆ ಜಾಗರವಿದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರ !

[ರಾಟಾಳ – ಬಾವಿಯಿಂದ ನೀರೆತ್ತುವ ಗಾಲಿಯ ಯಂತ್ರ ಸುಷುಮ್ನ – ಬೆನ್ನುಹುರಿಯಲ್ಲಿರುವ ನಾಡಿ

**ಸೈರಣೆ – ತಾಳ್ಮೆ**]

ಅಲ್ಲಮಪ್ರಭುಗಳು ದೇಹವನ್ನೆ ತೋಟ ಮಾಡಿ, ಮನಸ್ಸನ್ನೆ ಗುದ್ದಲಿ ಮಾಡಿ ಅದರಿಂದ ಭ್ರಾಂತಿಯ ಬೇರನ್ನು ಅಗೆದವರು. ಸಂಸಾರ ಎಂಬ ಮಣ್ಣಿನ ಹುಂಡಿಯನ್ನು ಒಡೆದು ಅಂದರೆ ಲೌಕಿಕ ಬದುಕನ್ನು ಮೀರಿ ಅಲೌಕಿಕ ಬದುಕಿನ ಕಡೆಗೆ ನಡೆದದ್ದನ್ನು ಇಲ್ಲಿ ವ್ಯಕ್ತಮಾಡುತ್ತಾರೆ. ಜ್ಞಾನದ ಹಸಿವಿದ್ದು, ವೃತ್ತಿಯಾಗಿ ವ್ಯವಸಾಯವನ್ನು ಆರಿಸಿಕೊಂಡಿದ್ದ ಗೊಗ್ಗಯ್ಯನನ್ನು ಅಲ್ಲಮನು ಸಂಧಿಸಿದನೆಂದು ನಂಬಿಕೆಯಿದೆ. ಅದೇ ವೇಳೆ ಅಲ್ಲಮಪ್ರಭು ಗೊಗ್ಗಯ್ಯನಿಗೆ ಹೊರಗಿನ ಕೃಷಿ ಒಳಗಿನ ಕೃಷಿಯಾಗಬೇಕು. ಅಂತ ಕೃಷಿಯನ್ನು ತಾನು ಮಾಡಿದ್ದೇನೆ. ಹಾಗೆ ಮಾಡಿ ಅಂತರಂಗದಲ್ಲೇ ಒಂದು ಸುಂದರವಾದ ತೋಟವನ್ನು ಮಾಡಿಕೊಂಡಿದ್ದೇನೆ ಎಂದು ಅಲ್ಲಮಪ್ರಭು ಈ ಮೇಲಿನ ವಚನದಲ್ಲಿ ಹೇಳಿದಂತಿದೆ.

ಕೃಷಿ ಎಂದರೆ ಹಿಂದೇಟು ಹಾಕುತ್ತಿರುವ ಇಂದಿನ ದಿನಮಾನಗಳಲ್ಲಿ ಕೃಷಿಯ ಬಗೆಗೆ ಒಲವು ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಶರಣರ ವಚನಗಳು ಸಹಾಯಕವಾಗುತ್ತವೆ. 'ಕೃಷಿ ತೋ ನಾಸ್ತಿ ದುರ್ಭಿಕ್ಷಂ' ಎನ್ನುವ ಸಂಸ್ಕೃತದ ಮಾತೊಂದಿದೆ. ಅಂದರೆ ಯಾವ ದೇಶದಲ್ಲಿ ಕೃಷಿ ಸಮೃದ್ಧವಾಗಿದೆಯೋ ಆ ದೇಶಕ್ಕೆ ದುರ್ಭಿಕ್ಷೆ ಬರುವುದಿಲ್ಲ. ಕಳೆದ ಆರೇಳು ದಶಕಗಳಲ್ಲಿ ಈ ದೇಶದಲ್ಲಿ ಕೃಷಿಯನ್ನು ಶ್ರೀಮಂತಗೊಳಿಸುವಂತ ಯಾವ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರಗಳು ಹಾಕಿಕೊಳ್ಳಲಿಲ್ಲ ಹಾಗಾಗಿ ಈ ದೇಶದ ಕೃಷಿ ಹಾಗೂ ಕೃಷಿಕ ಅಪಾಯದ ಅಂಚಿಗೆ ಬಂದು ತಲುಪಿದ್ದಾನೆ. ಕೃಷಿಯನ್ನು ಉದ್ಧಾರ ಮಾಡುವಂತ ಅನೇಕ ಯೋಜನೆಗಳನ್ನು ನಮ್ಮ ಸರ್ಕಾರಗಳು ಕೈಗೊಳ್ಳಬೇಕಾಗಿದೆ.

**ಗ್ರಂಥ ಋಣ**


1) ವಚನ ಸಾಹಿತ್ಯ ಸಂಗ್ರಹ : ಸಂ : ಸಂ. ಶಿ. ಭೂಸನೂರಮಠ

2) ಕನ್ನಡ ಸಾಹಿತ್ಯ ಕೋಶ : ಡಾ॥ ರಾಜಪ್ಪ ದಳವಾಯಿ

3) ಬಸವಯುಗದ ವಚನ ಮಹಾಸಂಪುಟ : ಸಂ : ಡಾ ॥ ಎಂ. ಎಂ. ಕಲಬುರ್ಗಿ

4) ಬಸವೋತ್ತರ ಯುಗದ ವಚನ ಮಹಾಸಂಪುಟ : ಸಂ ಡಾ॥ ಎಂ. ಎಂ. ಕಲಬುರ್ಗಿ